# ಗೋಡೆ ಚಿತ್ರಕ್ಕೆ ವಜ್ರ ಮಹೋತ್ಸವ!



ತೀರ್ಥಹಳ್ಳಿ ತಾಲ್ಲೂಕಿನ ಬಸವಾನಿ ಗ್ರಾಮದಲ್ಲಿರುವ ನನ್ನ ಅಜ್ಜನ ಮನೆಯ ಉಪ್ಪರಿಗೆ (ಮಹಡಿ)ಯ ನೋಟವಿದು. ಗೋಡೆಯ ಮೇಲೆ ಕಾಣುವ ಲಕ್ಷ್ಮೀ ಚಿತ್ರವನ್ನು ಅಜ್ಜ ಸುಮಾರು 60 ವರ್ಷಗಳ ಹಿಂದೆ ಬರೆದಿರಬಹುದು. ಗೋಡೆಯ ಮೇಲೆ ಆಗ ಲಭ್ಯವಿರುವ ಪರಿಕರಗಳಲ್ಲೇ ಚಿತ್ರ ರಚಿಸಿದ್ದರೂ ಇನ್ನೂ ಹೊಚ್ಚ ಹೊಸದರಂತೆ ಕಾಣುತ್ತಿದ್ದು, ಮನೆಗೆ ಬಂದವರ ಗಮನ ಸೆಳೆಯುತ್ತಿದೆ.

**-ಎಸ್. ಶಿವಪ್ರಸಾದ್, ಶಿವಮೊಗ್ಗ**



# ಡ್ರಿಪ್ ವೈರಿನ ದರಗು ಜಲ್ಲೆ

ಮಲೆನಾಡಿನಲ್ಲಿ ಹಿಂದೆಲ್ಲ ಬೆತ್ತದ ಜಲ್ಲೆಗಳನ್ನು ದರಗು (ಒಣಗಿದ ಎಲೆ) ತರಲು ಉಪಯೋಗಿಸುತ್ತಿದ್ದರು. ಬೆತ್ತದ ಲಭ್ಯತೆ ಕಡಿಮೆಯಾದಂತೆ ಕಾಡಿನಲ್ಲಿ ಸಿಗುವ ಬೀಳಿನಿಂದ ಜಲ್ಲೆ ಮಾಡತೊಡಗಿದರು. ಈ ಬೀಳಿನ ಜಲ್ಲೆ ಬಾಳಿಕೆ ಕಡಿಮೆ. ಈಗ ಡ್ರಿಪ್ ನೀರಾವರಿಗೆ ಬಳಸುವ ವೈರ್‌ನಿಂದ ಮಾಡಿದ ದರಗಿನ ಜಲ್ಲೆಗಳು ಜನಪ್ರಿಯವಾಗಿವೆ. ಒಂದು ಜಲ್ಲೆಗೆ ಎಂಟು ನೂರು ರೂಪಾಯಿವರೆಗೂ ದರವಿದೆ. ಸರಿಯಾಗಿ ಬಳಸಿಕೊಂಡರೆ 7–8 ವರ್ಷಗಳಿಗೂ ಹೆಚ್ಚು ಕಾಲ ಬಾಳಿಕೆ ಬರುತ್ತದೆ. ಇದರಿಂದ ಪ್ರತಿ ವರ್ಷ ಜಲ್ಲೆಗಳಿಗೆ ಬಂಡವಾಳ ಹಾಕುವ ಅಗತ್ಯವಿಲ್ಲ .

**-ಮಾಧವಿಲತಾ ಚೆಪ್ಪಳಕಟ್ಟೆ, ಶಿವಮೊಗ್ಗ**

# ಮರದ ಮೇಲೆ ಹುಲ್ಲು ಸಂಗ್ರಹ

ಕೃಷಿಕರು ಹಾಗೂ ಹೈನುಗಾರಿಕೆ ಮಾಡುವವರು ವರ್ಷಾವಧಿ ಬೇಕಾಗುವಷ್ಟು ಬಿಳಿ ಹುಲ್ಲನ್ನು ಕೊಟ್ಟಿಗೆಯ ಅಟ್ಟವೋ ಅಥವಾ ಅದಕ್ಕೆಂದೇ ಸೀಮಿತವಾದ ಜಾಗದಲ್ಲಿಯೋ ವ್ಯವಸ್ಥಿತವಾಗಿ ಇಟ್ಟುಕೊಳ್ಳುವುದು ರೂಢಿ. ಆದರೆ ಉತ್ತರಖಂಡ ರಾಜ್ಯದಲ್ಲಿ ಅಲ್ಲಿನ ಕೃಷಿಕರು ಬಿಳಿ ಹುಲ್ಲಿನ ಕಟ್ಟನ್ನು ಗಿಡಮರಗಳ ಮೇಲೆ ಇಟ್ಟುಕೊಂಡು ಸಂರಕ್ಷಿಸಿಕೊಳ್ಳುತ್ತಾರೆ.

ಆ ರಾಜ್ಯದ ಬಹುಭಾಗ ಪರ್ವತಗಳಿಂದ ತುಂಬಿದೆ. ಎಲ್ಲೆಲ್ಲೂ ಗುಡ್ಡಗಳೇ! ಆ ಗುಡ್ಡದ ಮೇಲೆಲ್ಲಾ ಸುಂದರವಾದ ಮನೆಗಳು. ಅಲ್ಲಲ್ಲಿ ಭತ್ತದ ಕೃಷಿ ಮಾಡುವವರು ಇದ್ದಾರೆ. ಅಲ್ಲಿನ ಕೃಷಿಕರಿಗೆ ಸಮತಟ್ಟಿನ ಜಾಗವೇ ಇಲ್ಲ. ಇರುವ ಮೊಳದುದ್ದದ ಜಾಗದಲ್ಲಿಯೇ ಭತ್ತದ ನಾಟಿ ಮಾಡುತ್ತಾರೆ. ಭತ್ತವನ್ನು ಬೇರ್ಪಡಿಸಿದ ಮೇಲೆ ಆ ಹುಲ್ಲನ್ನು ಇಟ್ಟುಕೊಳ್ಳುವುದು ದೊಡ್ಡ ಸಮಸ್ಯೆ. ಗದ್ದೆಯಲ್ಲಿಯೇ ಇಟ್ಟರೇ ಮತ್ತೇನನ್ನೂ ಬೆಳೆಯಲು ಸಾಧ್ಯವಾಗದು. ಹೀಗಾಗಿ ಅಲ್ಲಿನ ಕೃಷಿಕರು ಗದ್ದೆ, ಮನೆಯ ಸಮೀಪದ ಗಿಡ ಮರಗಳ ಟೊಂಗೆಗಳಿಗೆ ಬಿಳಿ ಹುಲ್ಲಿನ ಕಟ್ಟುಗಳನ್ನು ಇಟ್ಟುಕೊಂಡು ಜೋಪಾನ ಮಾಡುತ್ತಾರೆ.

**-ಗಣಪತಿ ಹಾಸ್ಪುರ, ಯಲ್ಲಾಪುರ**

